ಆ) ಹಾಗಿದ್ದಲ್ಲಿ, ಇದುವರೆವಿಗೂ ಕೈಗೆತ್ತಿಕೊಳ್ಳದಿರಲು ಕಾರಣವೇನು?

ಇ) ಈ ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಕೆ.ಹೆಚ್ ರಂಗನಾಥ್ (ಲೋಕೋಪಯೋಗಿ ಸಚಿವರು)

ಅ) ಕಂಗ್ರಾಳಿ ಕಡೋಲಿ ರಸ್ತೆಯ ಮಾರ್ಕಂಡೇಯ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣದ ಅವಶ್ಯಕತೆ ಗಮನಕ್ಕೆ ಬಂದಿದೆ.

ಆ) ಸರ್ವೆ ಕೆಲಸ ಮುಗಿದಿದ್ದು, ಅಂದಾಜು ಪಟ್ಟಿ ತಯಾರಿಯಲ್ಲಿದೆ.

ಇ) ಮುಂದಿನ ಹಣಕಾಸಿನ ವರ್ಷದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು.

ವಿಷಯ : ಸೋಮವಾರಪೇಟೆ ತಾಲ್ಲೂಕಿನಲ್ಲಿ ಮಿನಿ ವಿಧಾನ ಸೌಧದ ಕೆಲಸ ಕುಂಠಿತ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 397 (41)

ಶ್ರೀ ಎ.ಎಂ ಬೆಳ್ಳಿಯಪ್ಪ (ಸೋಮವಾರಪೇಟೆ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸೋಮವಾರಪೇಟೆ ತಾಲ್ಲೂಕಿನಲ್ಲಿ (ಸೋಮವಾರ ಪೇಟೆಯಲ್ಲಿ) ಒಂದು ಮಿನಿ ವಿಧಾನ ಸೌಧದ ಕಟ್ಟಡ ಕೆಲಸವು ಮಂದಗತಿಯಲ್ಲಿ ಸಾಗುತ್ತಿರಲು ಕಾರಣವೇನು?

ಆ) ಇಲ್ಲಿಯವರೆಗೆ ಈ ವಿಧಾನ ಸೌಧದ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ.

ಇ) ಈ ಕೆಲಸವನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು)

ಅ) ಸೋಮವಾರ ಪೇಟೆಯಲ್ಲಿ ನಿರ್ಮಾಣವಾಗುತ್ತಿರುವ ಮಿನಿ ವಿಧಾನ ಸೌಧ ಕಟ್ಟಡದ ಕೆಲಸ ಮಂದಗತಿಯಲ್ಲಿ ನಡೆಯುತ್ತಿಲ್ಲ. ಈಗಾಗಲೇ ನೆಲ ಅಂತಸ್ತಿಗೆ ಮೆಲ್ಛಾವಣೆ ಹಾಕಲಾಗಿದ್ದು ಮಳೆಗಾಲದಿಂದಾಗಿ ಕೆಲಸ ನಿಂತಿದ್ದು, ಮಳೆಗಾಲ ಕಳೆದೊಡನೆ ನಿಗದಿತ ಗುರಿಗಳನ್ನು ಸಾಧಿಸುವ ಯೋಜನೆ ಇದೆ.

ಆ) ಇಲ್ಲಿಯವರೆಗೆ ಒಟ್ಟು ರೂ. 21.30 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಈ ಕೆಲಸವನ್ನು ಗುತ್ತಿಗೆ ಕರಾರಿನಂತೆ 13-5-96 ರೊಳಗೆ ಪೂರ್ಣಗೊಳಿಸುವ ಯೋಜನೆಯಿದೆ.

ವಿಷಯ : ಬೆಳಗಾಂ ಜಿಲ್ಲೆಯ ನೀರಾವರಿ ಇಲಾಖೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 398(736)

ಶ್ರೀ ಶಿವಾನಂದ ಹೆಚ್.ಕೌಜಲಗಿ(ಬೈಲಹೊಂಗಲ) ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಬೆಳಗಾಂ ಜಿಲ್ಲೆಯಲ್ಲಿ 1993-94 ಹಾಗೂ 1994-95ರಲ್ಲಿ ಎಷ್ಟು ಕೆಲಸಗಳು ನೀರಾವರಿ ಇಲಾಖೆಗೆ ಸಂಬಂಧಿಸಿದಂತೆ ಮಂಜೂರಾಗಿರುತ್ತದೆ; (ಕೆಲಸದ ವಿವರಗಳನ್ನು ತಾಲ್ಲೂಕುವಾರು ನೀಡುವುದು;

ಆ. ಈ ಕೆಲಸಗಳಿಗೆ ತಾಂತ್ರಿಕ ಮಂಜೂರಾತಿಯನ್ನು ಹಾಗೂ ಆಡಳಿತಾತ್ಮಕ ಮಂಜೂರಾತಿಯನ್ನು ಯಾವಾಗ ಕೊಡಲಾಯಿತು;

ಇ. ಬೆಳಗಾಂ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಕೆಲಸಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಸಣ್ಣ ನೀರಾವರಿ ಕೆಲಸಗಳಿಗೆ ಏನಾದರೂ ಆರ್ಥಿಕ ತೊಂದರೆ ಇದೆಯೆ ಮತ್ತು ಏಪ್ರಿಲ್ 1994 ರಿಂದ ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿರುವುದು (ವಿವರಗಳೊನ್ನದಗಿಸುವುದು);

ಉ. ಸಣ್ಣ ನೀರಾವರಿ ಇಲಾಖಾವತಿಯಿಂದ ತುರ್ಕರಸೀಗೆ ಹಳ್ಳಿಯಲ್ಲಿ ಕಟ್ಟುತ್ತಿರುವ ಶಾಲಾ ಕಟ್ಟಡ ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ. ಬಂದಿದ್ದಲ್ಲಿ, ಇದನ್ನು ಯಾವಾಗ ಪೂರ್ಣಗೊಳಿಸಲಾಗುವುದು;

ಋ. ಸಿದ್ದ ಸಮುದ್ರ ನೀರಾವರಿ ಕೆಲಸ ಕಳೆದ ಎರಡು ತಿಂಗಳಿನಿಂದ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಮತ್ತು ಈ ಸಿದ್ದ ಸಮುದ್ರದ ಮಂಜೂರಾದ ಎಲ್ಲಾ ಕೆಲಸಗಳನ್ನು ಇನ್ನು ಎಷ್ಟು ದಿವಸಗಳಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಎಂ.ಪಿ. ಕೇಶವಮೂರ್ತಿ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ. 1993-94ರಲ್ಲಿ 33 ಕಾಮಗಾರಿಗಳ ಅಂದಾಜಿಗೆ ಅನುಮೋದನೆ ನೀಡಲಾಗಿದೆ. ಅನುಬಂಧ-1 ರಲ್ಲಿ ಒದಗಿಸಲಾಗಿದೆ.

ಆ. ಅನುಬಂಧ-2 ರಲ್ಲಿ ಒದಗಿಸಲಾಗಿದೆ.

ಇ. ಬಂದಿದೆ.

ಉ. ಆರ್ಥಿಕ ತೊಂದರೆ ಇಲ್ಲ. 46.70 ಲಕ್ಷ ರೂಗಳು (ವಿವರವನ್ನು ಅನುಬಂಧ-3ರಲ್ಲಿ ಒದಗಿಸಲಾಗಿದೆ).

ಊ. ಕಟ್ಟಡದ ಕಾಮಗಾರಿ ಪ್ರಗತಿಯಲ್ಲಿದ್ದು ಮುಗಿಯುವ ಹಂತದಲ್ಲಿದೆ.

ಋ. ಬಂದಿದೆ. ಮಂಜೂರಾದ ಕಾಮಗಾರಿಗಳನ್ನು ಶೀಘ್ರವಾಗಿ ಕೈಗೆತ್ತಿಕೊಂಡು ಮುಗಿಸಲಾಗುವುದು.

ಅನುಬಂಧ-1

ಬೆಳಗಾವಿ ಜಿಲ್ಲೆಯಲ್ಲಿ 93-94ನೇ ಸಾಲಿನಲ್ಲಿ ಮಂಜೂರಾದ ಸಣ್ಣ ನೀರಾವರಿ ಕಾಮಗಾರಿಗಳು :

ಕ್ರ.ಸಂ.	ತಾಲ್ಲೂಕು	ಹೊಸಕೆರೆ ನಿರ್ಮಾಣ	ಅಣೆಕಟ್ಟು ಮತ್ತು ಬಂದಾರು ನಿರ್ಮಾಣ	ಏತನೀರಾವರಿ ಯೋಜನೆಗಳು	ಏತನೀರಾವರಿ ಯೋಜನೆಗಳ ನವೀಕರಣ	ಕೆರೆ ಕಲ್ಯಾಣ ಹೂಳೆತ್ತುವುದು	ಕೆರೆ ಜೀರ್ಣೋದ್ಧಾರ	ಒಟ್ಟು
1)	ಬೈಲಹೊಂಗಲ	1	–	–	–	4	3	8
2)	ಸೌದತ್ತಿ	2	–	–	–	3	–	5
3)	ಅಥಣಿ	1	–	–	–	2	–	3
4)	ಹುಕ್ಕೇರಿ	2	–	–	–	1	–	3
5)	ಚಿಕ್ಕೋಡಿ	–	1	1	1	1	–	4
6)	ಗೋಕಾರ	–	1	–	–	1	–	2
7)	ಖಾನಾಪುರ	–	–	–	–	4	–	4
8)	ರಾಮದುರ್ಗ	–	–	–	–	2	2	4
		6	2	1	1	18	5	33

ಬೆಳಗಾವಿ ಜಿಲ್ಲೆಯಲ್ಲಿ 94-95ನೇ ಸಾಲಿನಲ್ಲಿ ಸಣ್ಣನೀರಾವರಿ ಕಾಮಗಾರಿಗಳು ಯಾವುದೂ ಮಂಜೂರಾಗಿರುವುದಿಲ್ಲ.

ನೀಇ 145 ಸನೀವಿ 94

ಹನಸು :

ಅನುಬಂಧ-2

ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ಪಡೆದ ವಿವರಗಳು

(93-94 ಮತ್ತು 94-95)

ಕ್ರ. ಸಂ.	ಕೆಲಸದ ಹೆಸರು	ಆಡಳಿತಾತ್ಮಕ ಮಂಜೂರಾತಿ ಪಡೆದ ದಿನಾಂಕ	ತಾಂತ್ರಿಕ ಮಂಜೂರಾತಿ ಪಡೆದ ದಿನಾಂಕ
1	2	3	4
	ಕೆರೆಗಳ ನಿರ್ಮಾಣ		
1)	ಬೈಲಹೊಂಗಲ ತಾಲ್ಲೂಕಿನ ಮ್ಯಾಕನಮಡಿ ಹತ್ತಿರ ಕೆರೆಯ ನಿರ್ಮಾಣ	11-3-93	ಜುಲೈ 93
2)	ಚಿಕ್ಕ ಬುದನೂರು ಹತ್ತಿರ ಕೆರೆಯ ನಿರ್ಮಾಣ ತಾಃ ಬೈಲಹೊಂಗಲ	13-1-93	17-2-93
3)	ಮುಗಳಿಹಾಳ ಹತ್ತಿರ ಕೆರೆ ನಿರ್ಮಾಣ ಸೌದತ್ತಿ ತಾಲ್ಲೂಕು	27-1-94	ಫೆಬ್ರವರಿ 94
4)	ಅಡಹಳ್ಳಿ ಹತ್ತಿರ ಕೆರೆ ನಿರ್ಮಾಣ ತಾ : ಅಥಣಿ	1-2-93	ಫೆಬ್ರವರಿ 94
5)	ಕಮತನೂರ ಹತ್ತಿರ ಕೆರೆ ನಿರ್ಮಾಣ ತಾ : ಹುಕ್ಕೇರಿ	6-1-94	ಏಪ್ರಿಲ್ 94
6)	ರಾಶಿಂಗ್ ಹತ್ತಿರ ಕೆರೆ ನಿರ್ಮಾಣ ತಾ : ಹುಕ್ಕೇರಿ	31-3-94	ಏಪ್ರಿಲ್ 94
7)	ಅಂಕಲಿ ಸೈಟ್-2 ಕೆರೆ ನಿರ್ಮಾಣ ತಾ : ಹುಕ್ಕೇರಿ	31-3-94	ಮೇ 94
	ಅಣ್ಣೆಕಟ್ಟು, ಮತ್ತು ಬಂದಾರ ನಿರ್ಮಾಣ :		
1)	ಹುನ್ನರಗಿ ಹತ್ತಿರ ಬಿಡ್ಜ್ ಕಂ ಬ್ಯಾರೇಜ್ ತಾ : ಚಿಕ್ಕೋಡಿ	27-3-93	ಮೇ 93
2)	ಅದರಾದಿ ಹತ್ತಿರ ಬ್ರಿಡ್ಜ್ ಕಂ ಬ್ಯಾರೇಜ್ ತಾ : ಗೋಕಾಕ್	14-5-93	ಜೂನ್ 93

ಏತ ನೀರಾವರಿ ಯೋಜನೆಗಳ ನಿರ್ಮಾಣ :

1)	ಬೋಜ್ ಏತ ನೀರಾವರಿ 2ನೇ ಹಂತ		
	ತಾ : ಚಿಕ್ಕೋಡಿ	ಆಗಸ್ಟ್ 93	ಆಗಸ್ಟ್ 93

ಏತ ನೀರಾವರಿ ಯೋಜನೆಗಳ ನವೀಕರಿಸುವುದು :

1)	ಸಲಮವಾಡಿ ಹತ್ತಿರ ಏತ ನೀರಾವರಿ ಯೋಜನೆಯನ್ನು ನವೀಕರಿಸುವುದು.		
	ತಾ : ಹುಕ್ಕೇರಿ	6-10-93	ಡಿಸೆಂಬರ್ 93

ಕೆರೆ ಕಲ್ಯಾಣ ಮತ್ತು ಕೆರೆಯ ಹೂಳೆತ್ತುವುದು :

1)	ಮರಕುಂಜಿ ಕೆರೆಯ ಹೂಳೆತ್ತುವುದು.	ಡಿಸೆಂಬರ್ 93	ಅಕ್ಟೋಬರ್ 93
2)	ಹಿರೇಕೊಪ್ಪ ಕೆರೆ -ಸದರ-	ಡಿಸೆಂಬರ್ 93	ಜನವರಿ 94
3)	ಹಿರೇಬುದನೂರು ಕೆರೆ -ಸದರ-	ಜನವರಿ 94	ಜನವರಿ 94
4)	ಅರಟಾಳ ಕೆರೆ -ಸದರ-	ಜೂನ್ 93	ಜೂನ್ 93
5)	ಕೊಹಳ್ಳಿ ಕೆರೆ -ಸದರ-	ಜೂನ್ 93	ಜೂನ್ 93
6)	ಕಡತನ ಬಾಗೇವಾಡಿ ಕೆರೆ -ಸದರ-	ಫೆಬ್ರವರಿ 94	ಫೆಬ್ರವರಿ 94
7)	ಫಸ್ಟ್ಳಿ ಕೆರೆ -ಸದರ-	ಫೆಬ್ರವರಿ 94	ಫೆಬ್ರವರಿ 94
8)	ಚಾಪಗಾಂವ ಕೆರೆ -ಸದರ-	ಫೆಬ್ರವರಿ 94	ಫೆಬ್ರವರಿ 94
9)	ಗಂಧಿಗವಾಡ ಕೆರೆ -ಸದರ-	ಡಿಸೆಂಬರ್93	ಜನವರಿ 94
10)	ತೋರಣಗಟ್ಟಿ ಕೆರೆಯ ಹೂಳೆತ್ತುವುದು.	1-3-94	ಮಾರ್ಚ್ 94
11)	ಮುದೇನೂರು -ಸದರ-	ಅಕ್ಟೋಬರ್94	ಅಕ್ಟೋಬರ್ 93
12)	ಸಾರಾಪುರ -ಸದರ-	ಮೇ 93	ಮೇ 93
13)	ಮಲ್ಲಾಪುರ -ಸದರ-	ಸೆಪ್ಟಂಬರ್ 93	ಸೆಪ್ಟಂಬರ್ 93
14)	ಬೈಲಪಾಡ -ಸದರ-	3-11-93	3-11-94
15)	ಸಿದ್ದಸಮುದ್ರ -ಸದರ-	ಆಗಸ್ಟ್ 93	ಆಗಸ್ಟ್ 94
16)	ಸಾಣೆಕೊಪ್ಪ ಬಂದಾರದ ಹೂಳೆತ್ತುವುದು.	9-3-93	9-3-93
17)	ನಾಯಿಂಗ್ಲ್ಜ್ ಕೆರೆ ಹೂಳೆತ್ತುವುದು	ಆಗಸ್ಟ್93	ಆಗಸ್ಟ್ 93
18)	ಸಿಲ್ತಿಬಾವಿ -ಸದರ-	ಸೆಪ್ಟಂಬರ್ 93	ಸೆಪ್ಟಂಬರ್ 93

ಪ್ರವಾಹ ನಿಯಂತ್ರಣ ಯೋಜನೆಗಳು :

1)	ಮೂಡಲಗಿ ಗ್ರಾಮದ ಪ್ರವಾಹ ನಿಯಂತ್ರಣ		
	ತಾ : ಗೋಕಾಕ್	ಜೂನ್ 93	ಆಗಸ್ಟ್ 93

2)	ಯಾದವಾಡ -ಸದರ-	ಡಿಸೆಂಬರ್ 93	ಡಿಸೆಂಬರ್ 93
3)	ಎಡೂರು ಗ್ರಾಮದ -ಸದರ- ತಾ : ಚಿಕ್ಕೋಡಿ	ಏಪ್ರಿಲ್ 94	ಏಪ್ರಿಲ್ 94

<u>ಕೆರೆಗಳ ಜೀರ್ಣೋದ್ಧಾರ ಯೋಜನೆಗಳು</u> :

1)	ತೋರಣಗಟ್ಟಿ ಕೆರೆಯ ಬಲದಂಡೆ ಕಾಲುವೆಯ ಸುಧಾರಣೆ ತಾ : ರಾಮದುರ್ಗ	ಮಾರ್ಚ್ 94	ಮಾರ್ಚ್ 94
2)	ತೋರಣಗಟ್ಟಿ ಕೆರೆಯ ಎಡದಂಡೆ ಕಾಲುವೆಯ ಸುಧಾರಣೆ ತಾ : ರಾಮದುರ್ಗ	ಮಾರ್ಚ್ 94	ಮಾರ್ಚ್ 94
3)	ಸಿದ್ದಸಮುದ್ರ ಕೆರೆಯ ಎಡದಂಡೆ ಕಾಲುವೆ ಮತ್ತು ಸರ್ವೀಸ್ ರಸ್ತೆ ಸುಧಾರಣೆ ತಾ : ಬೈಲಹೊಂಗಲ	ಮಾರ್ಚ್ 94	ಮಾರ್ಚ್ 94
4)	ಸಿದ್ದ ಸಮುದ್ರ ಕೆರೆಯ ಬಲದಂಡೆ ಕಾಲುವೆ ಮತ್ತು ಸರ್ವೀಸ್ ರಸ್ತೆ ಸುಧಾರಣೆ ತಾ : ಬೈಲಹೊಂಗಲ	ಾರ್ಚ್ 94	ಮಾರ್ಚ್ 94
5)	ಸಿದ್ದಸಮುದ್ರ ಬೆಳವಡಿ ಗ್ರಾಮದ ಹದ್ದಿಯ ಕಾಲುವೆ ಮತ್ತು ಸರ್ವೀಸ್ ರಸ್ತೆ ಸುಧಾರಣೆ ತಾ : ಬೈಲಹೊಂಗಲ	ಮಾಚ್ 94	ಮಾರ್ಚ್ 94

ಅನುಬಂಧ-3

ಬೆಳಗಾಂ ಜಿಲ್ಲೆಯ ಸಣ್ಣ ನೀರಾವರಿ ಕಾಮಗಾರಿಗಳ ಏಪ್ರಿಲ್ 94 ರಿಂದ ಜುಲೈ 94 ರವರೆಗಿನ ಲೆಕ್ಕ ಶೀರ್ಷಿಕೆವಾರು ವೆಚ್ಚಗಳ ವಿವರ :

(ಲಕ್ಷಗಳಲ್ಲಿ)

ಕ್ರ. ಸಂ.	ಲೆಕ್ಕ ಶೀರ್ಷಿಕೆ	ಮಾಹೆಯಾನ ವೆಚ್ಚಗಳು				ಒಟ್ಟು ಮೊತ್ತ
		4:94	5:94	6:94	7:94	
1)	4702 ಹೊಸ ಕೆರೆಗಳು	-	0.10	5.27	3.24	8.61
2)	ಅಣೆಕಟ್ಟು ಮತ್ತು ಪಿಕಪ್‌ಗಳು	-	1.31	6.75	0.65	8.71
3)	ಏತ ನೀರಾವರಿ ಯೋಜನೆಗಳು	-	-	-	1.10	1.10
4)	ಏತ ನೀರಾವರಿ ಯೋಜನೆಗಳ ನವೀಕರಣ	-	0.22	0.10	3.10	3.42
5)	ಕೆರೆಗಳ ಹೂಳೆತ್ತುವುದು ಮತ್ತು ಕೆರೆ ಕಲ್ಯಾಣ	0.71	0.36	8.68	8.66	16.41
	ಒಟ್ಟು:	0.71	1.99	20.80	16.75	40.25
6)	4711 ಫೀಡರ್ ಛಾನಲ್ ಕಾಮಗಾರಿಗಳು	-	0.87	1.98	3.60	6.45
	ನಿವ್ವಳ ಮೊತ್ತ :	0.71	2.86	22.78	20.35	46.70

ವಿಷಯ : ಉಡುಪಿ ತಾಲ್ಲೂಕು ಬನ್ನಾಡಿ ಹೊಳೆಗೆ "ಕುದುರು ಮನೆ" ಎನ್ನುವಲ್ಲಿ ತಡೆಗೊಡೆ ನಿರ್ಮಾಣ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 400(730)

ಶ್ರೀ ಪಿ. ಬಸವರಾಜ್(ಬ್ರಹ್ಮಾರ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲೂಕ್ ಬ್ರಹ್ಮಾವರ್ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಬನ್ನಾಡಿ ಹೊಳೆಗೆ ವಡ್ಡರ್ಸಿ-ಕಾರ್ಕಡ ಗ್ರಾಮದ ಮಧ್ಯ "ಕುದುರೆ ಮನೆ" ಎನ್ನುವಲ್ಲಿ ಎಷ್ಟು ನೀರು ತಡೆಕಟ್ಟು ನಿರ್ಮಿಸುವ ಅವಶ್ಯಕತೆ ಸರ್ಕಾರದ ಗಮನಕ್ಕೆ ಬಂದಿದೆಯೇ?